# 6. ನಾನು ಪ್ರಾಸ ಬಿಟ್ಟ ಕತೆ

**– ಮಂಜೇಶ್ವರ ಗೋವಿಂದ ಪೈ**

**ಪೀಠಿಕೆ:** ಒಂದಾನೊಂದು ಕಾಲವಿತ್ತು. ಆಗ ಕವಿಗಳು ಒಂದೇ ಒಂದು ಮಾತ್ರೆಯ ವ್ಯತ್ಯಾಸವಾಗದಂತೆ ತಮ್ಮ ಕವಿತೆಗಳನ್ನು ಛಂದೋಬದ್ಧವಾಗಿ ಬರೆಯಬೇಕಿತ್ತು. ಆಗಿನ ಕಾಲದ ಕವಿಗಳಿಗೆ ಛಂದಸ್ಸುಶಾಸ್ತ್ರದ ಆಳವಾದ ಪರಿಜ್ಞಾನವಿತ್ತು. ಹಳೆಗನ್ನಡ, ನಡುಗನ್ನಡದ ಶಬ್ದಗಳನ್ನೂ ಅವುಗಳ ಅರ್ಥಗಳನ್ನೂ ಅವರು ಬಲ್ಲವರಾಗಿದ್ದರು. ಅಲ್ಲದೆ ಕಾವ್ಯಲಕ್ಷಣವನ್ನೂ ಸಾಹಿತ್ಯ ಮೀಮಾಂಸೆಯನ್ನೂ ಅವರು ಓದಿಕೊಂಡಿರಬೇಕಿತ್ತು. ತಮ್ಮ ಮನಸ್ಸಿನಲ್ಲಿ ಮೂಡಿಬಂದ ಯಾವ ಭಾವವೇ ಇರಲಿ, ಅದನ್ನು ಅವರು ಅತ್ಯಂತ ಶಿಸ್ತುಬದ್ಧವಾದ ಶಾಸ್ತ್ರಸಿದ್ಧವಾದ ಚೌಕಟ್ಟಿನಲ್ಲೇ ಪ್ರಕಟಿಸಬೇಕಿತ್ತು. ಅಂಥ ಕಾಲದಲ್ಲಿ ಕವಿಯೊಬ್ಬ ತಾನು ಪ್ರಾಸವನ್ನು ಬಿಟ್ಟು ಬರೆಯುವೆ ಎಂದರೆ ಅದೊಂದು ಕ್ರಾಂತಿಕಾರಕ ಘೋಷಣೆಯೇ ಹೌದು! ಮಂಜೇಶ್ವರ ಗೋವಿಂದ ಪೈಗಳು ಮೊದಲ ಬಾರಿಗೆ ಕನ್ನಡದಲ್ಲಿ ಪ್ರಾಸವನ್ನು ಬಿಟ್ಟು ಬರೆಯುವ ಧೈರ್ಯ ತೋರಿದರು.

## ಪ್ರಾಸ ತೊರೆದ ಕವಿ

ಮಂಜೇಶ್ವರ ಗೋವಿಂದ ಪೈ (1883 ಮಾರ್ಚ್ 23 – 1963 ಸೆಪ್ಟೆಂಬರ್ 6) – ಕನ್ನಡದ ಪ್ರಪ್ರಥಮ ರಾಷ್ಟ್ರಕವಿಗಳು. ಇವರು ಹುಟ್ಟಿದ್ದು ಆಗ ಮದರಾಸು ಪ್ರಾಂತ್ಯಕ್ಕೆ ಸೇರಿದ್ದ ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ. ರಾಜ್ಯಗಳ ಪುನರ್ವಿಂಗಡಣೆಯಾದಾಗ ತನ್ನೂರು ಕೇರಳಕ್ಕೆ ಹೋದುದನ್ನು ಕಂಡು ಹಳಹಳಿಸಿದ್ದ ಅಪ್ಪಟ ಕನ್ನಡಪ್ರೇಮಿ ಇವರು. ಮಲೆಯಾಳಂ, ತಮಿಳು, ಕನ್ನಡ, ಮರಾಠಿ, ಕೊಂಕಣಿ, ಬಂಗಾಳಿ, ಸಂಸ್ಕೃತ ಮುಂತಾದ ಭಾರತೀಯ ಭಾಷೆಗಳಲ್ಲದೆ ಲ್ಯಾಟಿನ್, ಗ್ರೀಕ್ ಮುಂತಾದ ಅಭಿಜಾತ ಭಾಷೆಗಳನ್ನೂ ಜರ್ಮನ್, ಫ್ರೆಂಚ್, ಇಂಗ್ಲೀಷ್, ಇಟಾಲಿಯನ್ ಮೊದಲಾದ ಪಾಶ್ಚಾತ್ಯ ಭಾಷೆಗಳನ್ನೂ ಕಲಿತರು. ಒಟ್ಟು 25 ಭಾಷೆಗಳಲ್ಲಿ ಪೈಗಳಿಗೆ ಪ್ರಾವಿಣ್ಯವಿತ್ತು. ಇಂತಹ ಕವಿಯೂ ಪ್ರಾಸ ಬಿಟ್ಟು ಬರೆದ ಸಾಹಿತ್ಯ ರಚನೆಯ ಬಗ್ಗೆ ತಿಳಿಯೋಣ

## ತಮ್ಮನ ಉಪನಯನ ಕಾರ್ಯ

ಜಯ ಸಂವತ್ಸರದ ಮಾಘಮಾಸದ ಕೊನೆಯ ವಾರ, 1895ನೆಯ ಇಸವಿಯ ಫೆಬ್ರವರಿ ತಿಂಗಳಿನದೂ ಕೊನೆಯ ವಾರ, ಮಂಗಳೂರಲ್ಲಿ ನಮ್ಮ ಮನೆಯಲ್ಲಿ ತಮ್ಮನ ನೂಲುಮದುವೆಗೆ(ಉಪನಯನ) ಸಮೀಪಿಸಿದೆ. ಚಪ್ಪರ ಹಾಕಿದೆ. ಫೆಬ್ರವರಿಯಲ್ಲಿ ಎಂದೂ ಇಲ್ಲದ ಮಳೆ ಜಿನುಗುತ್ತಿದೆ. ಅಂದು ಶನಿವಾರವೊ, ರವಿವಾರವೊ ಅಥವಾ ಪ್ರಾಯಶಃ ಶಿವರಾತ್ರಿಯೊ, ಹೇಗೂ  ಇಲ್ಲದ ದಿನ. ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂದು ಕಡೆ ಮಂಡಿಗೆ(ಸಿಹಿಯಾದ ಹೋಳಿಗೆ ರೀತಿಯ ತಿನಿಸು)ಗಳನ್ನು ಮಡುಚುತ್ತಾರೆ, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ. ಆ ನಡುವೆ ಕುಗ್ಗಿದ ಕೊರಳಲ್ಲಿ ಇದೊಂದು ಹಾಡು ಕೇಳಿಸಿತು:

ಅಡವಿಗೆ ಪೋಪರೆನೆ । ಕರಿದಯ್ಯಾ ॥ಪಲ್ಲ॥

ಅಡವಿಯೊಳಗೆ ಬಲು । ಕಡುಖೂಳ ಮೃಗಗಳು

ಬಿಡದೆ ಬಾಧಿಪವೊ ನಿನ್ನ ॥ಅನು॥

## ಏಕಾಂಕ ನಾಟಕ ರಚನೆ

ಆಗ್ಗೆ ನನಗೆ ಏನಾಯಿತೊ, ಏನು ತೋಚಿತೊ ದೇವರೇ ಬಲ್ಲ. ಮತ್ತೆ ಚಪ್ಪರದ ಗವುಜು(ಗದ್ದಲ) ನನಗೆ ಕೇಳಿಸಲಿಲ್ಲ. ನೆಟ್ಟಗೆ ಹೋದೆ, ಅಭ್ಯಾಸದ ಪುಸ್ತಕವನ್ನು ಹಿಡಿದೆ, ಬರೆಯತೊಡಗಿದೆ. ಇಂದಿನ ಮಾತಿನಲ್ಲಿ ಏಕಾಂಕ ನಾಟಕ ಎನ್ನಬಹುದಾದ ಒಂದು ನಾಟಕವನ್ನು ಇಳಿಹೊತ್ತಿನೊಳಗೆ ಬರೆದು ಮುಗಿಸಿದೆ. ಅದಾದ 2–3 ದಿನಗಳಲ್ಲಿ ಅಂತಹದೇ ಮತ್ತೊಂದು ನಾಟಕವನ್ನು ಬರೆಯ ಹತ್ತಿದೆ, ಆದರೆ ಅದನ್ನು ಕೊನೆಗೂ ಮುಗಿಸಿಲ್ಲ. ಆ ನಾಟಕಗಳಲ್ಲಿ ಬರೇ ಮಾತು, ಹಾಡುಗಳಲ್ಲದೆ ವೃತ್ತ – ಕಂದಗಳೂ ಇಲ್ಲ, ಒಂದೊ ಅಥವಾ ಎರಡೊ ನೋಟಗಳಲ್ಲದೆ ಹೆಚ್ಚಿಗೆ ನೋಟಗಳೂ ಇಲ್ಲ. ಅವಕ್ಕೆ ಹೆಸರಿಕ್ಕಲೂ ಇಲ್ಲ. ಮುಗಿಸಿದ ನಾಟಕದಲ್ಲಿ ತಾಯಿ–ತಂದೆಯರ ಒಬ್ಬನೇ ಮಗನು ಕಾಡಿಗೆ ಹೋಗುತ್ತಾನೆ, ಹೋಗಬಾರದೆಂದು ಅವರು ಅಂಗಲಾಚಿ ಬೇಡುತ್ತಾರೆ. ಅಮೇಲಣ ಕಥೆ ಮರೆತು ಹೋಗಿದೆ. ಕೇಳಿದ ಹಾಡಿಗೂ ಬರೆದ ನಾಟಕಕ್ಕೂ ಭೇದವಿಷ್ಟೇ, ಅದು ತತ್ಸಮ, ಇದು ತದ್ಭವ. ಮುಗಿಸಿದ ನಾಟಕದ ಕಥೆ ಇಳಿಯಷ್ಟಾದರೂ ನೆನಪಿಗೆ ಬಾರದು. ಹೀಗೆ ಸಾಹಿತ್ಯಮಂದಿರದ ಹೊಸ್ತಿಲಲ್ಲಿ ಅಕಾಂಡವಾಗಿ ಎಡವಿದೆ, ಮುಚ್ಚುಕದಕ್ಕೆ ಡಿಕ್ಕಿ ಹೊಡೆದೆ, ಅಗುಳಿ ಇಲ್ಲದ ಬಾಗಿಲು ಹಾರಿತು, ಒಳಹೊಕ್ಕೆ. ನನ್ನ ಜೀವಮಾನದಲ್ಲಿ ಅದೊಂದು ಅಮಗ.(ಸಂಭ್ರಮ) ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನವನ್ನು ಎಂದಿಗೂ ಮರೆಯುವಂತಿಲ್ಲ. ಅಂದಿಗೆ ಒಂದು – ಒಂದೂವರೆ ವರ್ಷಗಳ ಹಿಂದೆ 1893ರಲ್ಲಿ ಸಾಂಗಲಿಯದೊಂದು ಮರಾಟಿ ನಾಟಕ ಮಂಡಳಿ ಮಂಗಳೂರಿಗೆ ಬಂದಿತ್ತು. ಅವರು ಆಡಿದ ಹಲವಾರು ನಾಟಕಗಳನ್ನು ಕಂಡಿದ್ದ ನನಗೆ ಅಂಥವನ್ನು ಬರೆಯಬೇಕೆಂದು ಮನಸ್ಸು ತುಯ್ಯುತ್ತಿತ್ತು. ಅಲ್ಲಿಂದಲೇ ಕೆಲಕೆಲವು ಹಾಡುಗಳನ್ನು ಮನಸ್ಸಿನಲ್ಲೇ ಜೋಡಿಸುತ್ತಲೂ ಮನಸ್ಸಿನಲ್ಲೇ ಜಾಡಿಸುತ್ತಲೂ ಇದ್ದೆ. ಕೊನೆಗೆ ಆ ನಾಟಕಗಳಂತೆ 5 ಅಂಕಗಳ ಉದ್ದಕ್ಕೆ ಒಮ್ಮೆಲೆ ಹೆಣೆಯಲಾರದೆ ಏಕಾಂಕವನ್ನು ಬರೆದೆ. ಆದರೆ 1895ರ ಫೆಬ್ರವರಿಯತನಕಾ ಕಾಗದದಲ್ಲಿ ಊರಿದ್ದಿಲ್ಲ.

## ಯಕ್ಷಗಾನದ ಪ್ರಸಂಗ

ನಮ್ಮ ಮನೆತನ ಮಂಗಳೂರಿನದಾದರೂ, ತಂದೆಯ ಮನೆ ಮಂಗಳೂರಲ್ಲೇ ಇದ್ದರೂ, ನಾವು ಹುಟ್ಟಿದುದೂ ಬೆಳೆದುದೂ ಮಂಜೇಶ್ವರದಲ್ಲಿ, ನಮ್ಮ ತಾಯಿಯ ತವರುಮನೆಯಲ್ಲಿ. ಮಂಗಳೂರಲ್ಲಿ ನಮ್ಮ ಮನೆಯಲ್ಲಿದ್ದು ಕಲಿಯುತ್ತಿದ್ದಾಗಲೂ ಸಾಲೆಯ ಬಿಡುಗಾಲದಲ್ಲಿ ಹೋಗಿ ಉಳಿಯುತ್ತಿದ್ದುದು ಮಂಜೇಶ್ವರದಲ್ಲಿ. ಅಲ್ಲಿ ಕಾರ್ತಿಕದಿಂದ ವೈಶಾಖದವರೆಗೆ ಆಗಾಗ್ಗೆ ಆಯಾ ದಶಾವತಾರದ ಆಟದ ಮೇಳದವರು ಬಂದು ಯಕ್ಷಗಾನದ ಆಟವಾಡುತ್ತಿದ್ದರು. ನಮ್ಮಲ್ಲಿಯೂ ವರ್ಷೇ ವರ್ಷೇ ಹಲವು ಆಟಗಳನ್ನು ಆಡಿಸುತ್ತಿದ್ದರು. ಚಿಕ್ಕಂದಿನಿಂದಲೇ ಅವನ್ನು ನೋಡಿ ವಿಸ್ಮಿತನಾದ ನಾನು 1895ನೆಯ ಮೇ ತಿಂಗಳಲ್ಲಿ ಒಂದು ಯಕ್ಷಗಾನವನ್ನು ಬರೆಯಲಿಕ್ಕೆ ನಿಲುಕಿದೆ. ಹೆಸರು ಮಕರಾಕ್ಷನ ಕಾಳಗ. ಕಥೆ 19ನೆಯ

ಪುರಾಣದಲ್ಲಿಯದು. ಮಕರಾಕ್ಷನಾರೊ ಆತನೇ ಬಲ್ಲ. ಶ್ರೀರಾಮನೇನೋ ಅವನನ್ನು ಸಂಹರಿಸುತ್ತಾನೆ. ಮೂರನೆಯ ಒಂದು ಪಾಲು ಬರೆದಾಯಿತು. ಮನಸ್ಸಿಗೆ ಒಗ್ಗಲಿಲ್ಲ, ಹರಿದುಬಿಟ್ಟೆ.

### ಛಂದೋಪದ್ಯಗಳ ರಚನೆ

ಆಮೇಲೆ ಮಂಗಳೂರಿನ ಬಾಸೆಲ್ ಮಿಶನ್‌ನವರು ಶಬ್ದಮಣಿದರ್ಪಣದಿಂದಲೂ ಛಂದೋಂಬುಧಿಯಿಂದಲೂ ಸಂಗ್ರಹಿಸಿ ಪ್ರಕಟಿಸಿದ (1889) **'ಹಳಗನ್ನಡ ವ್ಯಾಕರಣ ಸೂತ್ರಗಳು'** ಎಂಬ ಪುಸ್ತಕವನ್ನು, ಅದರಲ್ಲಿ ಮುಖ್ಯತಃ ಛಂದೋಲಕ್ಷಣ ಪ್ರಕರಣವನ್ನು ಓದಿ ವೃತ್ತ – ಕಂದ – ಷಟ್ಪದಿಗಳ ಲಕ್ಷಣಗಳನ್ನು ಅರಿತುಕೊಂಡೆ. ಜತೆಗೆ ಅರ್ಥಯುಕ್ತವಾದ ಕನ್ನಡ ಜೈಮಿನಿಭಾರತ, ಗದುಗಿನ ಭಾರತ, ಶಬರಶಂಕರವಿಲಾಸವೇ ಮೊದಲಾದ ಮಹಾಕಾವ್ಯಗಳನ್ನು ಓದಿ, 1898ರವರೆಗೆ ಆ ವಿವಿಧ ಛಂದಸ್ಸುಗಳಲ್ಲಿ ಎಷ್ಟೋ ಪದ್ಯಗಳನ್ನು ಬರೆದೆ, ಬರೆದಂತೆಯೇ ಹರಿದುಬಿಟ್ಟೆ. ಈ ನಡುವೆ 1896ರಲ್ಲೇನೋ ಹೀಗಾಯಿತು. ಆ ಚಿಕ್ಕಂದಿನಲ್ಲಿ ಒಮ್ಮೆ ನಮ್ಮಲ್ಲಿ ಸೋದರರೊಳಗೆ ಜಗಳ ಹತ್ತಿದಾಗ ನನ್ನಲ್ಲಿ ಸಿಟ್ಟಿಗೆದ್ದ ನನ್ನ ತಮ್ಮಂದಿರು ನಾನು ಕವನಿಸುತ್ತೇನೆಂದು ನಮ್ಮ ತಾಯಿಯೊಂದಿಗೆ ದೂರಿತ್ತರು. ನಮ್ಮ ತಾಯಿ ತೀರ ಹಳಬಳಕೆಯ ನೇಮವಂತೆ.

### ಕವನಿಸುವ ಹುಚ್ಚಿಗೆ ದಂಡನೆ

ತುಳುನಾಡಿನ ಸರ್ವಶ್ರೇಷ್ಠ ಯಕ್ಷಗಾನ ಕವಿಯಾದ ಮೂಲ್ಕಿಯ ವಾಸುದೇವ ಪ್ರಭು ಎಂಬವರು 'ಬಿಲ್ಲ ಹಬ್ಬ'ವನ್ನು ರಚಿಸುತ್ತಲೆ ಅವರಿಗೆ ಹುಚ್ಚು ಹಿಡಿಯಿತು, ಅನಂತರ **'ಸಮುದ್ರ ಮಥನ'**ವನ್ನು ರಚಿಸಿದ ಮೇಲೆ ಅವರ ಹುಚ್ಚು ಇಳಿಯಿತು, ಅತಏವ ಕವನಿಸಿದರೆ ಹುಚ್ಚು ಹತ್ತುತ್ತದೆಂದು ಮನಸಾರೆ ನಂಬಿದ್ದ ನಮ್ಮ ತಾಯಿ ಅದನ್ನು ಕೇಳುತ್ತಲೇ ನನ್ನಲ್ಲಿ ರೇಗಿ ಕವನಿಸುವ ಹುಚ್ಚನ್ನು ಬಿಡಿಸಲೆಂದು ನನ್ನನ್ನು ದಂಡಿಸಿದರು. ಅಂದಿನಿಂದ ಕೆಲಕಾಲ ಮನೆಯಲ್ಲಿ ಕವನಿಸಲಾರದೆ, ಮರಮರಕ್ಕೆ ತೊಟ್ಟಿಲು ಕಟ್ಟುತ್ತ ಹೋಗುತ್ತಿರುವ ತಿರುಕಿಯಂತೆ ನಡೆದಾಡುವಾಗ ಬೀದಿಯಲ್ಲೂ ಬಿಡುವಾದಾಗ ಸಾಲೆಯಲ್ಲೂ ಕವನಿಸುತ್ತಿದ್ದೆ. ಹೀಗೆಯೇ 1898ರವರೆಗೆ ನಡೆಯಿತು. 1899ರಲ್ಲಿ ಶೇಕ್‌ಸ್ಪೀಯರ್ 'ಟ್ವೆಲ್ಫ್ತ್ ನೈಟ್' ಎಂಬ ನಾಟಕದ ಮೊದನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ – ಕಂದಗಳಲ್ಲಿ ಕನ್ನಡಿಸಿ, ಅವನ್ನು ಶ್ರೀ ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ನವರಿಗೆ ಉಡುಪಿಗೆ ಕಳಿಸಿಕೊಟ್ಟೆ. ಮುಂದರಿಸು ಎಂದು ಅವರು ಹೇಳಿ ಕಳಿಸಿದರು. ಆದರೆ ಮುಂದರಿಸಲಿಲ್ಲ.

### ಪ್ರಾಸಬಿಡುವ ಗೋಜು?

1899– 1900ರಲ್ಲಿ ಶ್ರೀ ಪಂಜೆ ಮಂಗೇಶರಾಯರು ನನ್ನ ಕನ್ನಡ ಅಧ್ಯಾಪಕರಾದರು. ಆ ನಡುವೆ ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನನಗೆ ಪದೇ ಪದೇ ಸ್ಫುರಿಸುತ್ತಿತ್ತು. ಆದರೆ ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲ್ಲಿ ಕೈಹಾಕಲಾರದೆ, ಆ ಬಗ್ಗೆ ಬಲ್ಲವರು ಬೆನ್ನು ತಟ್ಟದಲ್ಲದೆ ಹಾಗೆ ಬರೆಯಲಿಕ್ಕೆ ಮನಸ್ಸು ಅಳುಕುತ್ತಿತ್ತು. ಕೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು ಎನಿಸುತ್ತಿತ್ತು. ನನ್ನ ಕವಿತೆಯನ್ನು ಕುರಿತು ಯಾರೊಂದಿಗೂ ಕೇಳಬಾರದು, ಯಾರು ಏನೆಂದರೂ ಮಾಡುವುದನ್ನು ಬಿಡಬಾರದು, ಉತ್ತ ಮೇಲಲ್ಲವೆ ಬಿತ್ತುವ ಯೋಚನೆ? ತಕ್ಕಷ್ಟು ಬರೆದ ಮೇಲಲ್ಲವೇ ಪ್ರಾಸದ ಗೋಜು? ಆ ತನಕ ತಣ್ಣಗಿರುವುದೇ ಲೇಸೆಂದು ಪ್ರಾಸ ಇಟ್ಟೇ ಬರೆಯುತ್ತ ಹೋದೆ.

### ಸುಹಾಸಿನಿ ಪತ್ರಿಕೆಯಲ್ಲಿ ಪದ್ಯಗಳು

1900ನೆಯ ಜುಲಾಯಿಯಲ್ಲಿ ಮಂಗಳೂರಿನಲ್ಲಿ 'ಸುವಾಸಿನಿ' ಎಂಬ ಮಾಸಪತ್ರಿಕೆ ಹೊರಟಿತು. ಅದೇ ಸಂಚಿಕೆಯಲ್ಲಿ 'ಸುವಾಸಿನಿ'ಯನ್ನು ಕುರಿತು ಕೆಲವು ಪದ್ಯಗಳನ್ನು ರಚಿಸಿದವರಿಗೆ 5 ರೂಪಾಯಿ ಬಹುಮಾನ ಕೊಡುವರೆಂದು ಪ್ರಕಟಿಸಿರುವುದನ್ನು ಕಂಡು ಪ್ರಾಸುಳ್ಳ 3 ಕಂದ ಪದ್ಯಗಳನ್ನು ಕಳಿಸಿಕೊಟ್ಟೆ. ಆ ಉಡುಗೊರೆ ನನಗೆ ದಕ್ಕಿತು. ಆ ಪದ್ಯಗಳು ಮರು ತಿಂಗಳಿನ ಸಂಚಿಕೆಯಲ್ಲಿ ಪ್ರಕಟವಾದವು. ನನ್ನ ಕವಿತೆ ಅಚ್ಚಾದುದು ಅದೇ ಮೊದಲ ಬಾರಿ. ಆಮೇಲೆ 1902ರಲ್ಲೊ 1903ರಲ್ಲೊ ನನ್ನ ಪ್ರಾಸಬದ್ಧವಾದ 'ಸುಭದ್ರಾ ವಿಲಾಪ' ಎಂಬ ಕಂದಷಟ್ಕವೂ 'ಕಾಲಿಯ ಮರ್ದನ' ಎಂಬ ಕಂದಷಟ್ಕವೂ ಸುವಾಸಿನಿಯಲ್ಲಿ ಪ್ರಕಟವಾದುವು.

### ಪ್ರಾಸ ಬಿಟ್ಟೆ ಬಿಟ್ಟೆ

1903 ರಿಂದ 1910ರ ವರೆಗೆ ನಾನು ಪ್ರಾಸವನ್ನು ಇಟ್ಟೂ ಬಿಟ್ಟೂ ಬರೆಯುತ್ತಿದ್ದೆ. ಪ್ರಾಸವಿಲ್ಲದುವನ್ನು ಹರಿದುಹಾಕಿದೆ. ಪ್ರಾಸವಿದ್ದವಲ್ಲಿ ಮನಸ್ಸಿಗೆ ಬಂದ ಕೆಲಸವನ್ನು ಮಾತ್ರ ಉಳಿಸಿದೆ. ಇವು ಮಂಗಳೂರಿನ 'ಸ್ವದೇಶಾಭಿಮಾನಿ' ಎಂಬ ಪತ್ರಿಕೆಯಲ್ಲಿ ಅಂದಂದು ಪ್ರಕಟವಾದವು, ಆಮೇಲೆ ನನ್ನ 'ಗಿಳಿವಿಂಡಿ'ನಲ್ಲಿ ಅಚ್ಚಾಗಿವೆ. 1911ನೆಯ ಏಪ್ರಿಲ್ ತಿಂಗಳಲ್ಲಿ ನಾನು ಸುಮಾರು ಒಂದು ತಿಂಗಳು ಬಡೋದಾ ರಾಜ್ಯದ ನವಸಾರಿ ಎಂಬಲ್ಲಿದ್ದೆ. ಆಗ್ಗೆ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನಮೇಷ ನೋಡದೆ 'ಪ್ರಾಸವನೀಗಲೆ ತೊರೆದುಬಿಡುವುದೇ ನಿಶ್ಚಯಂ' ಎಂದಾಯಿತು. ಮರದ ಹಣ್ಣು ಮರದ ಬುಡದಾಗೆ ಬಂತು. ಕೂಡಲೆ ರವೀಂದ್ರನಾಥ ಠಾಕೂರರ 'ಅಯಿ ಭುವನ ಮನೋಮೋಹಿನೀ' ಎಂದು ಮೊದಲಾಗುವ 'ಭಾರತ ಲಕ್ಷ್ಮೀ' ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದೆ. ಆಮೇಲೆ ಅವರದೇ 'ಶಿಶು' ಎಂಬ ಗ್ರಂಥದಲ್ಲಿಯ 'ವಿದಾಯ' ಎಂಬ ಕವಿತೆಯನ್ನೂ, ಅನಂತರ ಶೇಖ್ ಮುಹಮ್ಮದ ಇಕ್ಬಾಲರ 'ಹಿಂದೂಸ್ತಾನ ಹಮಾರಾ' ಎಂಬ ಉರ್ದು ಗೀತವನ್ನೂ ಕನ್ನಡಿಸಿದೆ. ಅಲ್ಲಿಂದ ಮಾರನೆಯ ತಿಂಗಳಲ್ಲಿ ಊರಿಗೆ ಮರಳಿದವನೇ ಅವನ್ನು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದೆ. ಪ್ರಾಸರಹಿತವಾದ ನನ್ನ ಕವಿತೆಗಳು ಅಚ್ಚಾದುದು ಅದೇ ಮೊದಲ ಬಾರಿ.

## ಅಭ್ಯಾಸ ಪ್ರಶ್ನೋತ್ತರಗಳು

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?**

**ಉತ್ತರ** : ಹಾಡು ಕಿವಿಗೆ ಬಿದ್ದಾಗ ಪೈಗಳು ಏಕಾಂಕ ನಾಟಕ ಎನ್ನಬಹುದಾದ ಒಂದು ನಾಟಕವನ್ನು ಇಳಿಹೊತ್ತಿನೊಳಗೆ ಬರೆದು ಮುಗಿಸಿದರು.

**3. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?**

**ಉತ್ತರ** : ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರು ಮಕರಾಕ್ಷನ ಕಾಳಗ.

**5. 'ಬಿಲ್ಲ ಹಬ್ಬ'ವನ್ನು ರಚಿಸಿದ ಕವಿ ಯಾರು?**

**ಉತ್ತರ** : ತುಳುನಾಡಿನ ಸರ್ವಶ್ರೇಷ್ಠ ಯಕ್ಷಗಾನ ಕವಿಯಾದ ಮೂಲ್ಕಿಯ ವಾಸುದೇವ ಪ್ರಭು ಎಂಬವರು 'ಬಿಲ್ಲ ಹಬ್ಬ'ವನ್ನು ರಚಿಸಿದರು.

**6. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?**

**ಉತ್ತರ** : 1899ರಲ್ಲಿ ಶೇಕ್ಸ್‌ಪಿಯರ್ 'ಟ್ವೆಲ್ಫ್ತ್ ನೈಟ್' ಎಂಬ ನಾಟಕದ ಮೊದನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ – ಕಂದಗಳಲ್ಲಿ ಕನ್ನಡಿಸಿ, ಮುದ್ದಣ ನವರಿಗೆ ಕಳಿಸಿಕೊಟ್ಟಾಗ, ಮುಂದುವರಿಸು ಎಂದು ಲೇಖಕರಿಗೆ ಸಲಹೆ ಕೊಟ್ಟರು.

**7. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು?**

**ಉತ್ತರ** : ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ರವೀಂದ್ರನಾಥ ಠಾಕೂರರ 'ಅಯಿ ಭುವನ ಮನೋಮೋಹಿನೀ' ಎಂದು ಮೊದಲಾಗುವ 'ಭಾರತ ಲಕ್ಷ್ಮೀ' ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದರು.

**8. ಗೋವಿಂದ ಪೈ ಅವರು ಬರೆದ ಏಕಾಂಕ ನಾಟಕದ ಕಥೆ ಏನು?**

**ಉತ್ತರ** : ಗೋವಿಂದ ಪೈ ಅವರು ಬರೆದ ಏಕಾಂಕ ನಾಟಕದಲ್ಲಿರುವ ವಿಷಯ ತಾಯಿ–ತಂದೆಯರ ಒಬ್ಬನೇ ಮಗನು ಕಾಡಿಗೆ ಹೋಗುತ್ತಾನೆ, ಹೋಗಬಾರದೆಂದು ಅವರು ಅಂಗಲಾಚಿ ಬೇಡುತ್ತಾರೆ.

**9. 'ಸುವಾಸಿನಿ' ಪತ್ರಿಕೆಯನ್ನು ಕುರಿತು ಗೋವಿಂದ ಪೈ ಅವರು ಬರೆದ ಕವನಕ್ಕೆ ದೊರೆದ ಬಹುಮಾನವೇನು?**

**ಉತ್ತರ** : 'ಸುವಾಸಿನಿ' ಪತ್ರಿಕೆಯನ್ನು ಕುರಿತು ಗೋವಿಂದ ಪೈ ಅವರು ಬರೆದ ಕವನಕ್ಕೆ 5 ರೂಪಾಯಿ ಬಹುಮಾನ ದೊರೆಯಿತು.

**10. ಪೈ ಅವರು ರಚಿಸಿದ ಪ್ರಾಸ ಇಲ್ಲದ ಕವಿತೆಗಳು ಮೊದಲ ಬಾರಿಗೆ ಯಾವ ಪತ್ರಿಕೆಯಲ್ಲಿ ಪ್ರಕಟವಾದವು?**

**ಉತ್ತರ** : ಪೈ ಅವರು ರಚಿಸಿದ ಪ್ರಾಸ ಇಲ್ಲದ ಕವಿತೆಗಳು ಮೊದಲ ಬಾರಿಗೆ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟವಾದವು.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**1. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**

**ಉತ್ತರ** : ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಿದ್ದರು, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಿದ್ದರು ಹೀಗೆ ಇನ್ನೂ ಮುಂತಾದ ಸಿದ್ಧತೆಗಳಾಗುತ್ತಿದ್ದವು.

**2. ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?**

**ಉತ್ತರ** : ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಶಬ್ದಮಣಿದರ್ಪಣ ಮತ್ತು ಛಂದೋಂಬುಧಿಯಿಂದ ಸಂಗ್ರಹಿಸಿ ಪ್ರಕಟಿಸಿದ 'ಹಳಗನ್ನಡ ವ್ಯಾಕರಣ ಸೂತ್ರಗಳು' ಪುಸ್ತಕ, ಕನ್ನಡ ಜೈಮಿನಿಭಾರತ, ಗದುಗಿನ ಭಾರತ, ಶಬರಶಂಕರವಿಲಾಸ ಕೃತಿಗಳನ್ನು ಲೇಖಕರು ಓದಿಕೊಂಡರು.

**3. ಚಪ್ಪರದ ಗದ್ದಲದ ನಡುವೆ ಗೋವಿಂದ ಪೈ ಅವರಿಗೆ ಕೇಳಿಸಿದ ಹಾಡನ್ನು ಬರೆಯಿರಿ.**

**ಉತ್ತರ** : ಅಡವಿಗೆ ಪೋಪರೆನೆ । ಕರಿದಯ್ಯಾ ॥ಪಲ್ಲ॥
ಅಡವಿಯೊಳಗೆ ಬಲು । ಕಡುಖೂಳ ಮೃಗಗಳು
ಬಿಡದೆ ಬಾಧಿಪವೊ ನಿನ್ನ ॥ಅನು॥

**4. ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನದ ಬಗ್ಗೆ ಗೋವಿಂದ ಪೈ ಅವರು ಏನೆಂದು ಹೇಳಿದ್ದಾರೆ?**

**ಉತ್ತರ** : ಪೈ ಅವರು ಹಾಡೊಂದನ್ನು ಕೇಳಿ ತಾವು ನಾಟಕವೊಂದನ್ನು ಬರೆದ ಬಗ್ಗೆ ತಿಳಿಸುತ್ತಾ : "ಕೇಳಿದ ಹಾಡಿಗೂ ಬರೆದ ನಾಟಕಕ್ಕೂ ಭೇದವಿಷ್ಟೇ, ಅದು ತತ್ಸಮ, ಇದು ತದ್ಭವ. ಮುಗಿಸಿದ ನಾಟಕದ ಕಥೆ ಇಳಿಯಷ್ಟಾದರೂ ನೆನಪಿಗೆ ಬಾರದು. ಹೀಗೆ ಸಾಹಿತ್ಯಮಂದಿರದ ಹೊಸ್ತಿಲಲ್ಲಿ ಅಕಾಂಡವಾಗಿ ಎಡವಿದೆ, ಮುಚ್ಚುಕದಕ್ಕೆ ಡಿಕ್ಕಿ ಹೊಡೆದೆ, ಅಗುಳಿ ಇಲ್ಲದ ಬಾಗಿಲು ಹಾರಿತು, ಒಳಹೊಕ್ಕೆ. ನನ್ನ ಜೀವಮಾನದಲ್ಲಿ ಅದೊಂದು ಅಮಗ. ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನವನ್ನು ಎಂದಿಗೂ ಮರೆಯುವಂತಿಲ್ಲ." ಎಂದು ಹೇಳಿದ್ದಾರೆ.

**5. ಮಂಗಳೂರಿನಲ್ಲಿ ಮರಾಠಿ ನಾಟಕ ಮಂಡಳಿಯವರು ಆಡಿದ ನಾಟಕಗಳು ಗೋವಿಂದ ಪೈ ಅವರ ಮೇಲೆ ಬೀರಿದ ಪರಿಣಾಮವನ್ನು ವಿವರಿಸಿ.**

**ಉತ್ತರ** : ಮಂಗಳೂರಿಗೆ ಬಂದಿದ್ದ ಮರಾಠಿ ನಾಟಕ ಮಂಡಳಿಯವರು ಆಡಿದ ಹಲವಾರು ನಾಟಕಗಳನ್ನು ಕಂಡಿದ್ದ ಗೋವಿಂದ ಪೈ ಅವರಿಗೆ ಅಂಥವನ್ನು ಬರೆಯಬೇಕೆಂದು ಮನಸ್ಸು ತುಯ್ಯುತ್ತಿತ್ತು. ಅಲ್ಲಿಂದಲೇ ಕೆಲಕೆಲವು ಹಾಡುಗಳನ್ನು ಮನಸ್ಸಿನಲ್ಲೇ ಜೋಡಿಸುತ್ತಲೂ ಮನಸ್ಸಿನಲ್ಲೇ ಜಾಡಿಸುತ್ತಲೂ ಇದ್ದರು. ಕೊನೆಗೆ ಆ ನಾಟಕಗಳಂತೆ 5 ಅಂಕಗಳ ಉದ್ದಕ್ಕೆ ಒಮ್ಮೇಲೆ ಹೆಣೆಯಲಾರದೆ ಏಕಾಂಕವನ್ನು ಬರೆದರು.

**6. ಬಿಲ್ಲಹಬ್ಬ ಕೃತಿಯನ್ನು ರಚಿಸಿದ ವಾಸುದೇವ ಪ್ರಭು ಅವರಿಗೆ ಏನಾಯಿತು ಮತ್ತು ಅದನ್ನು ಅವರು ಹೇಗೆ ನಿವಾರಿಸಿಕೊಂಡರು?**

**ಉತ್ತರ** : ತುಳುನಾಡಿನ ಸರ್ವಶ್ರೇಷ್ಠ ಯಕ್ಷಗಾನ ಕವಿಯಾದ ಮೂಲ್ಕಿಯ ವಾಸುದೇವ ಪ್ರಭು ಎಂಬವರು 'ಬಿಲ್ಲ ಹಬ್ಬ'ವನ್ನು ರಚಿಸುತ್ತಲೆ ಅವರಿಗೆ ಹುಚ್ಚು ಹಿಡಿಯಿತು, ಅನಂತರ 'ಸಮುದ್ರ ಮಥನ'ವನ್ನು ರಚಿಸಿದ ಮೇಲೆ ಅವರ ಹುಚ್ಚು ಇಳಿಯಿತು.

**7. ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರ ಮಾತಿನಲ್ಲಿ ಬರೆಯಿರಿ.**

**ಉತ್ತರ** : ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರು – "ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನಮೇಷ ನೋಡದೆ 'ಪ್ರಾಸವನೀಗಲೆ ತೊರೆದುಬಿಡುವುದೇ ನಿಶ್ಚಯಂ' ಎಂದಾಯಿತು. ಮರದ ಹಣ್ಣು ಮರದ ಬುಡದಾಗೆ ಬಂತು. ಕೂಡಲೆ ರವೀಂದ್ರನಾಥ ಠಾಕೂರರ 'ಅಯಿ ಭುವನ ಮನೋಮೋಹಿನೀ' ಎಂದು ಮೊದಲಾಗುವ 'ಭಾರತ ಲಕ್ಷ್ಮೀ' ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದೆ." ಎಂದು ಹೇಳಿದ್ದಾರೆ.